



# ¼ ಇಂಚಿನ ಸೀಮ್ ಫುಟ್

## ಈ ಟ್ಯುಟೋರಿಯಲ್ನಲ್ಲಿ, ನೀವು ಉಷಾ ಜಾನೊಮ್ ¼ ಇಂಚು ಸೀಮ್ ಫುಟ್ ಬಳಸುವುದನ್ನು ಕಲಿಯಲಿದ್ದೀರಿ.




ಮಟ್ಟಸವಾದ ಸೀಮ್ ಒಬ್ಬ ಒಳ್ಳೆಯ ದರ್ಜಿಯ ಲಕ್ಷಣ. ಇದು ಯಾವುದೇ ಕೆಲಸಕ್ಕಾದರೂ ಒಂದು ಉತ್ತಮ ಅಂತ್ಯವನ್ನು ನೀಡಿ ಕಣ್ಣಿಗೆ ಸುಂದರವಾಗಿ ಕಾಣುವಂತೆ ಮಾಡುತ್ತದೆ. ರಿಪೇರಿ ಕೆಲಸದಲ್ಲಿ ಸಂತಸ ಪಡುವವರಿಗೆ ಒಂದು ಮಟ್ಟಸ ಸೀಮ್ ನಿರ್ಣಾಯಕ. ಈ ಟ್ಯುಟೋರಿಯಲ್ನಲ್ಲಿ, ನೀವು ಉಷಾ ಜಾನೊಮ್ ¼ ಇಂಚು ಸೀಮ್ ಫುಟ್ನ ಬಳಕೆಯನ್ನು ಕಲಿಯೋಣ. ಈ ಫುಟ್ ನಿಮ್ಮನ್ನು ಪರಿಪೂರ್ಣ ನಾಲ್ಕನೇ ಒಂದು ಇಂಚಿನ ಮಟ್ಟಸವನ್ನು ಹೊಲಿಯಲು ಸಶಕ್ತರನ್ನಾಗಿಸುತ್ತದೆ, ಮತ್ತಿದು ವಿಶೇಷವಾಗಿ ಪ್ಯಾಚ್ ಕೆಲಸ ಮಾಡುವವರೊಳಗೆ ಹೆಚ್ಚು ಜನಪ್ರಿಯ, ಏಕೆಂದರೆ ಇದು ಅಸಮವಾದ ಹೊಲಿಗೆಯ ಒತ್ತಡವನ್ನು ದೂರಮಾಡುತ್ತದೆ.

ಈ ಟ್ಯುಟೋರಿಯಲ್ಗೆ ನಿಮಗೆ ಬೇಕಾಗಿರುವ ವಸ್ತುಗಳೆಂದರೆ ಉಷಾ ಜಾನೊಮ್ ¼ ನೇ ಸೀಮ್ ಫುಟ್, ಕಡಿಮೆಯೆಂದರೂ 8*8 ಇಂಚಿನ ಒಂದು ಚೌಕಾಕಾರದ ಬಟ್ಟೆಯ ತುಂಡು, ನೂಲು, ಮತ್ತು ಒಂದು ಜೊತೆ ಕತ್ತರಿ. ಈ ನಾಲ್ಕನೇ ಒಂದು ಇಂಚಿನ ಸೀಮ್ ಫುಟ್ನ್ನು ವಿಶೇಷವಾಗಿಸುವುದೆಂದರೆ, ಇಲ್ಲಿರುವ ಈ ಮಾರ್ಗದರ್ಶಿ ಪ್ಲೇಟ್ ನೀವು ಕಾಲು ಇಂಚಾದರೂ ಮಟ್ಟಸವಾಗಿ ಹೊಲಿಯಲು ಸಾಧ್ಯವಿದೆ ಎಂದು ಖಚಿತಪಡಿಸುತ್ತದೆ. ಮತ್ತು ಇನ್ನೊಂದು ಸೈಡ್ನಲ್ಲಿರುವ ಇನ್ನೆರಡು ಗೆರೆಗಳು ತಿರುಗಿಸುವಾಗ ನಿಮಗೆ ಸಹಾಯ ಮಾಡುತ್ತವೆ.

ಆರಂಭಿಸೋಣ- ಸಾಮಾನ್ಯ ಪ್ರೆಸ್ಸರ್ ಫುಟ್ನ್ನು ¼ ಇಂಚು ಸೀಮ್ ಫುಟ್ಗೆ ತ್ವರಿತವಾಗಿ ಬದಲಿಸುವ ಮೂಲಕ ಆರಂಭಿಸೋಣ. ಬಟ್ಟೆಯನ್ನು ಫುಟ್ನ ಅಡಿಯಲ್ಲಿಡಿ ಆದರೆ ಬಟ್ಟೆಯ ಅಂಚನ್ನು ಮಾರ್ಗದರ್ಶಿ ಪ್ಲೇಟ್ಗೆ ಸರಿಯಾಗಿ ಜೋಡಿಸಲಾಗಿದೆ ಎಂದು ಖಾತ್ರಿಪಡಿಸಿಕೊಳ್ಳಿ ಮತ್ತು ಫುಟ್ನ್ನು ಕೆಳಗೆ ತನ್ನಿ.

ಈಗ ಯಂತ್ರವನ್ನು ಸಿದ್ಧಪಡಿಸಿಕೊಳ್ಳಿ- ಪ್ಯಾಟರ್ನ್ ಸೆಲೆಕ್ಟರ್ ಡಯಲ್ನ್ನು 'ಎ' ಗೆ ಮತ್ತು ಹೊಲಿಗೆಯ ಉದ್ದವನ್ನು 2 ಮತ್ತು 3 ಒಳಗೆ ಸೆಟ್ ಮಾಡಿಕೊಳ್ಳಿ.



ಫುಟ್ನ ಕೆಳ ಲೈನ್ವರೆಗೆ ನೇರವಾದ ಲೈನ್ನುದ್ದಕ್ಕೂ ಹೊಲಿಯಲು ಆರಂಭಿಸಿ, ಇದು ತಿರುಗುವಿಕೆಯನ್ನು ನಿರ್ದೇಶಿಸುತ್ತದೆ, ಮುಟ್ಟುತ್ತದೆ ಮತ್ತು ಈ ರೀತಿ ಬಟ್ಟೆಯ ಅಂಚಿಗೆ ಸಮಾನವಾಗಿರುತ್ತದೆ.

ಆ ಪರಿಪೂರ್ಣ ತಿರುವನ್ನು ಪಡೆಯಲು...ನನ್ನ ಮುಂದಿನ ಹಂತಗಳನ್ನು ಜಾಗರೂಕತೆಯಿಂದ ಗಮನಿಸಿ- ಸೂಜಿಯನ್ನು ಕೆಳಬಿಡಲು ಫ್ಲೈವೀಲ್ಗಳನ್ನು ನಿಮ್ಮೆಡೆಗೆ ತಿರುಗಿಸಿಕೊಳ್ಳಿ ಮತ್ತು ಬಟ್ಟೆಯನ್ನು ೯೦ ಡಿಗ್ರಿ ತಿರುಗಿಸಿ. ನೀವು ಈಗಷ್ಟೇ ಹೊಲಿದ ಲೈನ್ ಫುಟ್ನ ಮೇಲಿನ ಗುರುತಿಗೆ ಸರಿಹೊಂದುತ್ತದೆ ಎಂದು ಖಾತ್ರಿಪಡಿಸಿಕೊಳ್ಳಿ. ನೀವು ಕಪ್ಪನೆಯ ಮಾರ್ಗದರ್ಶಿ ಪ್ಲೇಟ್ ಈ ರೀತಿ ಬಟ್ಟೆಯ ಅಂಚಿಗೆ ಸಮನಾಗಿದೆ ಎಂಬುದನ್ನೂ ಕೂಡ ಖಚಿತಪಡಿಸಿಕೊಳ್ಳಿ.





ಮತ್ತೆ ಹೊಲಿಯಲು ಆರಂಭಿಸಿ. ಇದೇ ಪ್ರಕ್ರಿಯೆಯನ್ನು ಕೊನೆಯ ಮೂಲೆಯ ಅಂತ್ಯದವರೆಗೂ ಪ್ರತಿ ಮೂಲೆಯಲ್ಲೂ ಪಾಲಿಸಿ.



ಎಲ್ಲಾ ಅಂಚುಗಳನ್ನು ಹೊಲಿದ ನಂತರ, ದಾರವನ್ನು ಕತ್ತರಿಸಿ ಮತ್ತು ಬಟ್ಟೆಯ ತುಂಡನ್ನು ತೆಗೆಯಿರಿ. ಮತ್ತು ಪುನಃ ಕುಳಿತುಕೊಳ್ಳಿ ಮತ್ತು ಮಟ್ಟಸ ಹೊಲಿಗೆಯನ್ನು ಆನಂದಿಸಿ! ಈ ಕಾಲು ಇಂಚಿನ ಸೀಮ್ ಫುಟ್, ನಿಮ್ಮ ಉತ್ಪನ್ನಕ್ಕೆ ಅಚ್ಚುಕಟ್ಟುತನ ಮತ್ತು ವೃತ್ತಿಪರ ಕೊನೆಯನ್ನು ಅತೀ ವೇಗವಾಗಿ ನೀಡಲು ಇರುವ ದಾರಿ.



ಹಾಗಾಗಿ ನೀವು ಸರಳವಾಗಿಡಬಹುದು ಅಥವಾ ನೀವು ಬಯಸುವ ಚಮತ್ಕಾರವನ್ನು ಮಾಡಬಹುದು ಮತ್ತು ಕೊನೆಯ ಫಲಿತಾಂಶ ಮಾತ್ರ ಚೆನ್ನಾಗಿಯೇ ಕಾಣುತ್ತದೆ! ಇದೊಂದು ಅದ್ಭುತವಲ್ಲವೇ?